ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-1, July-August 2026, Pp. 66-70
©*IIMRD*, Mysuru
IIMRD JOURNALS
www.iimrd.com

# ಕನ್ನಡದಲ್ಲಿ ಪರಿವೇಷ್ಟಿತ ಧ್ವನಿಗಳ ಬದಲಾವಣೆಯ ಸಾಧ್ಯತೆಗಳು

**ಡಾ. ರವೀಂದ್ರ ಬಟಗೇರಿ**
ಉಪನ್ಯಾಸಕ, ವಳವಂಡವಾಡಿ, ಆಳಂದ, ಕಲಬುರಗಿ

**ಸಾರಾಂಶ: (Abstract)**

*ಯಾವುದೇ ಭಾಷೆಯಲ್ಲಿ ಧ್ವನಿ ಬದಲಾವಣೆಯಾಗುವ ಪ್ರಕ್ರಿಯೆ ಸಹಜವಾದದ್ದು. ಏಕೆ ಧ್ವನಿ ಬದಲಾವಣೆ ಘಟಿಸುತ್ತದೆ ಎನ್ನುವುದಕ್ಕೆ ಉಚ್ಚರಣೆಯ ಸೌಲಭ್ಯತೆಗೆ ಮಾನುಷ್ಯರು ಮಾಡಿಕೊಳ್ಳುವ ಒಂದು ಪ್ರಕ್ರಿಯೆ ಎನ್ನುವ ಸರಳ ಉತ್ತರ ಕೊಡಬಹುದು. ಆದರೆ ಯಾವ ಧ್ವನಿ ಯಾವ ಧ್ವನಿಯಾಗಿ ಬದಲಾಗುತ್ತದೆ ಮತ್ತು ಬದಲಾಗುವ ಸಾಧ್ಯತೆಗಳಿವೆ ಅನ್ನುವುದು ಅಧ್ಯಯನ ಯೋಗ್ಯವಾದ ವಿಷಯವಾಗಿದೆ. ಕನ್ನಡದಲ್ಲಿ ಈ ಬಗೆಯ ಅಧ್ಯಯನಗಳು ತುಂಬಾ ವಿರಳ ಮತ್ತು ಈವರೆಗೆ ಕನ್ನಡದಲ್ಲಿ ಧ್ವನಿಯ ಮೇಲೆ ನಡೆದಿರುವ ಅಧ್ಯಯನಗಳು ಈವರೆಗೆ ಘಟಿಸಿದ ಧ್ವನಿ ಬದಲಾವಣೆಗಳ ಬಗ್ಗೆ ಮುಖ್ಯವಾಗಿ ಮಾತನಾಡಿವೆ. ಅವುಗಳೆಲ್ಲ ಏಕೆ ಎನ್ನುವ ಪ್ರಶ್ನೆಗಿಂತ ಹೇಗೆ ಎನ್ನುವೆಡೆಗೆ ಹೆಚ್ಚು ಗಮನ ಹರಿಸಿವೆ. ಈ ಪತ್ರಿಕೆಯು ಏಕೆ ಒಂದು ಧ್ವನಿ ಇನ್ನೊಂದು ಧ್ವನಿಯಾಗಿ ಬದಲಾಗುತ್ತದೆ ಅದರ ಹಿಂದಿನ ಕಾರಣವೇನು ಎನ್ನುವ ಪ್ರಶ್ನೆಯನ್ನು ಮುಖ್ಯವಾಗಿ ಇಟ್ಟುಕೊಂಡು ಚರ್ಚಿಸುವ ಪ್ರಯತ್ನದ್ದಾಗಿದೆ.*

**ಮುಖ್ಯಪದಗಳು (Keywords):** *ಧ್ವನಿ ಬದಲಾವಣೆ, ಪರಿವೇಷ್ಟಿತ ಧ್ವನಿ, ವ್ಯಂಜನ ಧ್ವನಿ, ಸ್ವರಧ್ವನಿ, ಘೋಷ, ಅಘೋಷ, ಅನುನಾಸಿಕ*

## ಪೀಠಿಕೆ

ಜಗತ್ತಿನ ಪ್ರತಿಯೊಂದು ಭಾಷೆಯು ಆಡುಮಾತಿನ ರೂಪಗಳಲ್ಲಿ ನಿರಂತರ ಬದಲಾವಣೆಗೆ ಒಳಗಾಗುತ್ತದೆ. ಈ ಬದಲಾವಣೆಯು ಭಾಷೆಯ ಇತರೇ ಘಟಕಗಳಿಗಿಂತ ಧ್ವನಿಮಾ ಘಟಕದಲ್ಲಿ ಹೆಚ್ಚಾಗಿರುತ್ತದೆ. ಈ ಧ್ವನಿ ಬದಲಾವಣೆಗಳು ಕಾಲಾಂತರದಲ್ಲಿ ಶಿಷ್ಟ ಭಾಷಾರೂಪದಲ್ಲಿ ಕಂಡುಬಂದು ಸಾಮಾನ್ಯ ನಿಯಮಗಳಾಗುತ್ತವೆ. ಮಾನವರ ಸೌಲಭ್ಯಾಕಾಂಕ್ಷಿತನವು ಈ ಎಲ್ಲ ಬದಲಾವಣೆಗಳಿಗೆ ಮುಖ್ಯ ಕಾರಣವಾಗುತ್ತವೆ ಮತ್ತು ಕೆಲವೊಮ್ಮೆ ಅನ್ಯ ಭಾಷೆಯ ಪ್ರಭಾವವೂ ಕಾರಣವಾಗಬಹುದು.

ಕನ್ನಡದಲ್ಲಿ ಸ್ವರ ಮತ್ತು ವ್ಯಂಜನಗಳಲ್ಲಿ ಮುಖ್ಯವಾಗಿ ನಾಲ್ಕು ಮಾದರಿಯ ಧ್ವನಿ ಬದಲಾವಣೆಗಳ ಸಾಧ್ಯತೆಗಳಿವೆ.

ಸ್ವರ > ಮತ್ತೊಂದು ಸ್ವರವಾಗಿ ಬದಲಾಗುವುದು

ಸ್ವರ > ವ್ಯಂಜನವಾಗಿ ಬದಲಾಗುವುದು

*Please cite this article as:* ರವೀಂದ್ರ ಬಟಗೇರಿ. (2026). ಕನ್ನಡದಲ್ಲಿ ಪರಿವೇಷ್ಟಿತ ಧ್ವನಿಗಳ ಬದಲಾವಣೆಯ ಸಾಧ್ಯತೆಗಳು. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(1). ಪು.ಸಂ.* 66–70

ವ್ಯಂಜನ > ವ್ಯಂಜನವಾಗಿ ಬದಲಾಗುವುದು

ವ್ಯಂಜನ > ಸ್ವರವಾಗಿ ಬದಲಾಗುವುದು

**ಕನ್ನಡದಲ್ಲಿ ಧ್ವನಿ ಬದಲಾವಣೆಗೆ ಒಂದು ಸಾಮಾನ್ಯ ನಿಯಮ**

**1. ಸ್ವರ ಇನ್ನೊಂದು ಸ್ವರವಾಗುವುದು.**

*ತಮಿಳ > ತೆಮಿಳ, ಮೋಲ > ಮಲ, ಮೋಡ > ಮಾಡ, ಆನೆ > ಆನಿ, ಕೋಟೆ >ಕ್ವಾಟಿ, ಕೇರ > ಕ್ಯಾರ,*

**2. ಸ್ವರ ವ್ಯಂಜನ ಧ್ವನಿಯಾಗುವುದು**

*ಎಲೆ>ಯೆಲೆ, ಒಲೆ > ವಲೆ ಅಕ್ಕಿ > ಹಕ್ಕಿ (ಕೆಲವು ಒಳನುಡಿಗಳಲ್ಲಿ) ಇತ್ಯಾದಿ*

**3. ವರ್ಗೀಯ ವ್ಯಂಜನಗಳಲ್ಲಿ ಘೋಷ ಅದೇ ವರ್ಗದ ಅಘೋಷ ಧ್ವನಿಯಾಗುವುದು ಮತ್ತು ಇದರ ವಿರುದ್ಧವಾಗುವುದು**

*ಕ>ಗ, ಚ>ಜ, ಟ>ಡ, ತ>ದ, ಪ>ಬ*

*ಗ > ಕ, ಜ > ಚ, ಡ > ಟ, ದ > ತ, ಬ > ಪ* (ಈ ಸಾಧ್ಯತೆ ತುಂಬಾ ವಿರಳ)

**4. ವರ್ಗೀಯ ವ್ಯಂಜನಗಳಲ್ಲಿ ಘೋಷ ಅಥವಾ ಅಘೋಷ ಧ್ವನಿಗಳು ಅನುನಾಶಿಕವಾಗುವುದು.**

*ಡ > ಣ*

**5. ಅವರ್ಗೀಯ ವ್ಯಂಜನಗಳಲ್ಲಿ ಧ್ವನಿ ಉತ್ಪತಿ ಸ್ಥಾನದ ಹಿನ್ನೆಲೆಯಲ್ಲಿ ಧ್ವನಿ ಬದಲಾಗುವುದು.**

*ಸ>ಚ, ರ>ಡ, ಲ>ನ, ಲ>ಳ, ಇತ್ಯಾದಿ*

**6. ನಿಯತವಲ್ಲದ ಧ್ವನಿ ಬದಲಾವಣೆ**

*ಗ>ಲ (ಮುತ್ತುಗ> ಮುತ್ತುಲ)*

ಈ ಮೇಲಿನಂತೆ ಧ್ವನಿ ಬದಲಾವಣೆಯ ನಿಯಮವಾಗಿ ರೂಪಿಸಬಹುದೇನೋ.

ವ್ಯಂಜನ ಧ್ವನಿಗಳಲ್ಲಿ ವರ್ಗೀಯ ವ್ಯಂಜನ ಧ್ವನಿಗಳು ಮುಖ್ಯವಾಗಿ ಎರಡು ರೀತಿಯಲ್ಲಿ ಧ್ವನಿ ಬದಲಾವಣೆಯ ಸಾಧ್ಯತೆಯನ್ನು ಹೊಂದಿದೆ. ಒಂದು ವರ್ಗೀಯ ವ್ಯಂಜನ ಧ್ವನಿಯು ಇನ್ನೊಂದು ವರ್ಗೀಯ ವ್ಯಂಜನ ಧ್ವನಿಯಾಗುವುದು. ಎರಡು ಒಂದು ವರ್ಗೀಯ ವ್ಯಂಜನ ಧ್ವನಿಯು ಅವರ್ಗೀಯ ವ್ಯಂಜನ ಧ್ವನಿಯಾಗುವುದು. ಇದೇ ತರಹದ ಸಾಧ್ಯತೆಯನ್ನು ಅವರ್ಗೀಯ ವ್ಯಂಜನಗಳಲ್ಲೂ ಸಾಧ್ಯತೆಗಳಿವೆ. ಆದರೇ ಕೆಲವು ಅವರ್ಗೀಯ ವ್ಯಂಜನ ಧ್ವನಿಗಳಿಗೆ(ಯ, ವ, ಹ) ಸ್ವರ ಧ್ವನಿಯಾಗಿ ಬದಲಾಗುವ ಸಾಧ್ಯತೆ ಇದೆ. ಇದು ವರ್ಗೀಯ ವ್ಯಂಜನ ಧ್ವನಿಗಳಿಗೆ ಸಾಧ್ಯತೆಯಿಲ್ಲ.

ವರ್ಗೀಯ ವ್ಯಂಜನಗಳಲ್ಲಿ ಕವರ್ಗ, ಚವರ್ಗದೊಂದಿಗೆ, ಟವರ್ಗ, ತವರ್ಗದೊಂದಿಗೆ ಧ್ವನಿ ಬದಲಾವಣೆಯೂ ಸಾಹಚಾರ್ಯದ ಸಂಬಂಧವನ್ನು ಹೊಂದಿವೆ. ಕೆಲವೊಮ್ಮೆ ತವರ್ಗವು ಚವರ್ಗದ

ಧ್ವನಿಗಳೊಂದಿಗೆ (ತ>ಚ, ಜ>ದ) ಬದಲಾಗಬಲ್ಲದು. ಪವರ್ಗವು ವರ್ಗೀಯ ವ್ಯಂಜನಕಿಂತ ಅವರ್ಗೀಯ ವ್ಯಂಜನ ಧ್ವನಿಗಳೊಂದಿಗೆ ಹೆಚ್ಚು ಧ್ವನಿ ಬದಲಾವಣೆಯ ಸಂಬಂಧವನ್ನು ಹೊಂದುತ್ತವೆ. **ಬೊಂಬೆ > ಗೊಂಬೆ ನಿಮಿರು > ನಿಗುರು** ಇಂತಹ ಕೆಲವು ಸಂದರ್ಭಗಳಲ್ಲಿ ಮಾತ್ರ ಈ ಧ್ವನಿಗಳು ವರ್ಗೀಯ ವ್ಯಂಜನಗಳೊಂದಿದೆ ಧ್ವನಿ ಬದಲಾವಣೆ ಹೊಂದುತ್ತವೆ.

ವ್ಯಂಜನ ಧ್ವನಿಗಳಲ್ಲಿಯೇ ಪರಿವೇಷ್ಟಿತ(ಟವರ್ಗ) ಮತ್ತು ಓಷ್ಠ(ಪವರ್ಗ) ಧ್ವನಿಗಳಲಿ ಬದಲಾವಣೆಯ ಸಾಧ್ಯತೆಗಳು ಹೆಚ್ಚಾಗಿರುವುದನ್ನು ಕಾಣಬಹುದಾಗಿದೆ. ಈ ಎರಡು ವರ್ಗದ ಧ್ವನಿಗಳು ಹೆಚ್ಚು ವೈವಿದ್ಯಮಯವಾಗಿ ಬದಲಾವಣೆಯ ಸಾಧ್ಯತೆಗಳನ್ನು ಹೊಂದಿವೆ. ಪ್ರಸ್ತುತ ಈ ಲೇಖನದಲ್ಲಿ ಪರಿವೇಷ್ಟಿತ ಧ್ವನಿಗಳಾದ ಟ, ಡ, ಣ ಗಳ ಧ್ವನಿ ಬದಲಾವಣೆಯ ಸಾಧ್ಯತೆಯನ್ನು ಕುರಿತು ಗಮನಿಸಲಾಗಿದೆ.

ಈ ಪರಿವೇಷ್ಟಿತ ಧ್ವನಿಗಳನ್ನು ನಾಲಿಗೆಯ ತುದಿಯನ್ನು ಮಡಚಿ ಅದರ ಹಿಂದಿನ ಭಾಗವನ್ನು ಬಾಯಿಯ ಅಂಗುಳಕ್ಕೆ ತಾಗುವಂತೆ ಒಮ್ಮೆಲೆ ಮಡಚಿದ ತುದಿಭಾಗವನ್ನು ಮುಂದಿನ ಹಲ್ಲುಗಳಿಗೆ ಬಡೆಯುವಂತೆ ಉಚ್ಚರಿಸಿದಾಗ ಈ ಧ್ವನಿಗಳು ಉಚ್ಛಾರವಾಗುತ್ತವೆ.

**ಟ>ಡ –** (ನಿಯಮ ಮೂರು)

**ಡ>ಣ –** (ನಿಯಮ ನಾಲ್ಕು)

**ಡ>ದ –** ಡಬ್ಬಣ > ದಬ್ಬಳ, ಡಬ್ಬಲ್ಯಾ > ದಬ್ಬಲ್ಯ (ಗು.ಕ) (ದಾವಣಗೇರೆ> ಡಾವಣಗೇರೆ)

**ಡ>ರ –** ಕನ್ನಡ > ಕನ್ನರ/ ಕೆನರಾ, ಕರ್ಣಾಟ> ಕೆನರಿಸ್

**ಡ>ಳ, ಳ>ಡ –** ಕುಳಿತುಕೊ> ಕುಡು, ಕುಷಮಂಡ > ಕುಂಬಳ, ಬೋಳು > ಬೋಡ,

ಹೊಡಪು > ಹೊಳಪು (ಬಟ ಡಿಎನ್ಎಸ್, 2009), ದಾ**ಡಿ**ಮ > ದಾ**ಳಿ**ಂಬ

**ಣ > ಳ, –** ಲಂಪಟಣ/ಲಂಪಟಳ, ಗೆಳೆಯ > ಗೆಣೆಯ, ಕಣಕಿ > ಕಳಕಿ ಹೂಳು > ಹೂಣು, ಮುಣುಗು > ಮುಳುಗು, ಡಬ್ಬಣ > ದಬ್ಬಳ, ಅಂಗಣ> ಅಂಗಳ, ಕಂಕಣ> ಕಂಕಳ, ಗಿಣಿ> ಗಿಳಿ

ರ > ಣ – ಮುಗುದಾರ > ಮುಗುದಾನಿ/ಮುಗುರಾಣಿ,

ರ > ಳ– ಅಂಗಾರ > ಇಂಗಳ

**ಣ > ನ, ನ > ಣ** (ಜ, ಞ) – ಕೋಣ > ಕ್ವಾನ (ಉತ್ತರ ಕರ್ನಾಟಕ), ಇಷ್ಟು ಪ್ರಕಾರಗಳಲ್ಲಿ ಧ್ವನಿ ಬದಲಾವಣೆಯನ್ನು ಹೊಂದಿವೆ. ಈ ಧ್ವನಿಗಳ ಪರಸ್ಪರ ಬದಲಾವಣೆಗೆ ಕಾರಣಗಳನ್ನು ಈ ಮೇಲೆ ಹೇಳಿರುವ ನಿಯಮಗಳ(1–6) ಹಿನ್ನೆಲೆಯಲ್ಲಿ ಗಮನಿಸುವುದಾದರೆ.

1. **ಡ > ದ** – ಇದು ಉಚ್ಛರಣೆಯ ಸಾಮ್ಯತೆಯ ಕಾರಣವಿರಬಹುದು.

**2. ಡ>ಳ, ಳ>ಡ** – ಈ ಎರಡು ಧ್ವನಿಗಳ ಉಚ್ಛರಣಾ ಸ್ಥಾನ ಒಂದೆ ಆಗಿದೆ (ಆದರೆ, ಉಚ್ಛರಣಾ ಕ್ರಮ ಬೇರೆಯಾಗಿದೆ) (ನಿಯಮ – 5)

3. **ಡ > ರ** – ಡ > ಣ > ಳ > ಲ > ರ ಈ ಸಾಧ್ಯತೆಯ ಕಾರಣಕ್ಕೆ ಡ > ರ ಆಗುತ್ತದೆ.

4. **ಣ > ಳ** – ಡ > ಣ (ನಿಯಮ–4) > ಳ ಅಥವಾ ಎರಡು ಧ್ವನಿಗಳ ಉಚ್ಚರಣಾ ಸ್ಥಾನ ಒಂದೆ ಇರುವುದು ಬದಲಾವಣೆಗೆ ಕಾರಣವಾಗಿದೆ.

5. **ಣ > ರ** – ಣ > ಳ > ಲ > ರ

6. **ಣ > ನ, ನ > ಣ** (ಙ, ಞ) – ಕನ್ನಡದಲ್ಲಿ ಅನುನಾಸಿಕಗಳು ಪರಸ್ಪರ ಸಾಹಚಾರ್ಯದ ಸಂಬಂಧ ಹೊಂದಿವೆ. ಆದರೆ ಇದು **'ಮ'** ಅನುನಾಸಿಕ ಧ್ವನಿಯೊಂದಿಗೆ ನಡೆಯದು. **'ಙ'** ಈ ಸಾಧ್ಯತೆ ತುಂಬಾ ವಿರಳವಾದದ್ದು

ಹೀಗೆ ಈ ಧ್ವನಿ ಬದಲಾವಣೆಗೆ ಇರಬಹುದಾದ ಕಾರಣವನ್ನು ಕಂಡು ಕೊಳ್ಳಲಾಗಿದರೆ. ಈ ಮೇಲಿನ ಬದಲಾವಣೆಯ ಸಾಧ್ಯತೆಗಳನ್ನು ಇಟ್ಟುಕೊಂಡು, ಈ ಪರಿವೇಷ್ಟಿತ ಧ್ವನಿಗಳು ಯಾವ ಯಾವ ಧ್ವನಿಗಳಾಗಿ ಬದಲಾಗುವ ಸಾಧ್ಯತೆಗಳಿವೆ ಎನ್ನುವುದನ್ನು ಈ ಹಿಂದೆ ಘಟಿಸಿರುವ ಧ್ವನಿ ಬದಲಾವಣೆಗಳಿಂದ ಊಹಿಸಬಹುದಾಗಿದೆ.

**ನ > ಲ –** ನೋಟ>ಲೋಟ ನಿಂಬೆ>ಲಿಂಬೆ (ಸ್ವಚ್ಛಂದ ಪರಿವರ್ತನೆ)

**ನ > ಳ –** ಮಾನ್ಯಖೇಟ > ಮಳಖೇಡ

**ರ > ಡ –** ಗೀರು > ಗೀಟು

**ರ > ಳ –** ಕರಡಿ > ಕಳ್ಡಿ, ಕೊರಡು > ಕೊಳ್ಡ (ಚಿತ್ರದುರ್ಗ ಮತ್ತು ತುಮಕೂರು ಪರಿಸರ)

**ರ > ಲ –** ಲಾರಿ > ರಾಲಿ,

**ಲ > ಗ –** ಮೇಲೆ> ಮ್ಯಾಗ, ಮೇಲಣ> ಮೇಗಣ/ಮೇಗಳ

**ನ > ಲ –** ನೋಟು > ಲೋಟು, ನಿಂಬೆ > ಲಿಂಬೆ, ಲಿಂಗ > ನಿಂಗ (ಉಕ.) ನಿಂಗಮ್ಮ < ಲಿಂಗಮ್ಮ

ಪರಿವೇಷ್ಟಿತ ಧ್ವನಿಗಳು ಬದಲಾವಣೆ ಹೊಂದಿರುವ ಮತ್ತು ಈ ಧ್ವನಿಗಳ ಬದಲಾಯಿತ ಸ್ಥಾನದಲ್ಲಿ ಬರುತ್ತಿರುವ ಧ್ವನಿಗಳು ಹೊಂದುತ್ತಿರುವ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು (ಮೇಲೆ ಉದಾಹರಿಸಿರುವ) ಈ ಕೆಳಗಿನಂತೆ ಸಾಧಿಸಬಹುದು.

**ಟ, ಡ, ಣ ಧ್ವನಿಗಳು**

- ಸ್ವವರ್ಗದ ಧ್ವನಿಗಳೊಂದಿಗೆ ಪರಸ್ಪರ ಬದಲಾವಣೆ ಹೊಂದುತ್ತವೆ.
- ತ, ದ, ನ ಗಳಾಗಿ ಬದಲಾಗಬಲ್ಲವು.
- ಧ್ವನಿ ಉಚ್ಚರಣೆಯ ಸ್ಥಾನದ ಹಿನ್ನೆಲೆಯಲ್ಲಿ ಳ ಆಗಿ ಈ ಕಾರಣದಿಂದ ಲ, ರ ಗಳಾಗಿ ಬದಲಾಗಬಲ್ಲದು

- ಅನುನಾಸಿಕಗಳು ಪರಸ್ಪರ ಬದಲಾವಣೆಯ('ಮ' ಹೊರತುಪಡಿಸಿ) ಸಾಹಚಾರ್ಯದ ಸಂಬಂಧ ಙ(?), ಞ, ನ ಈ ಧ್ವನಿಗಳಾಗಿ ಬದಲಾಗುತ್ತವೆ.

  **ಡ>ಳ–** ಕೂಷ್ಮಾಂ**ಡ**> ಕುಂಬ**ಳ**, ದಾ**ಡಿ**ಮ >ದಾ**ಳಿ**ಂಬ

  **ಣ>ಳ–** ಅಂಗ**ಣ**> ಅಂಗ**ಳ**, ಕಂಕ**ಣ**> ಕಂಕ**ಳ**, ಗಿ**ಣಿ**> ಗಿ**ಳಿ**

  **ಲ>ಳ–** ಇ**ಲಿ**ಕಾ> ಇ**ಳಿ**ಗೆ,

  **ರ>ಳ–** ಅಂಗಾ**ರ**> ಇಂಗ**ಳ**

ಒಟ್ಟಾರೆಯಾಗಿ ಕನ್ನಡ ಭಾಷೆಯಲ್ಲಿ ಪರಿವೇಷ್ಟಿತ ಧ್ವನಿಗಳ ಬದಲಾವಣೆಯು ಭಾಷೆಯ ಸ್ವಾಭಾವಿಕ ಬೆಳವಣಿಗೆ ಮತ್ತು ಧ್ವನಿಶಾಸ್ತ್ರೀಯ ಪ್ರಕ್ರಿಯೆಯ ಪ್ರಮುಖ ಅಂಶವಾಗಿದೆ. ಇಂತಹ ಧ್ವನಿ ಬದಲಾವಣೆಗಳು ಉಚ್ಚಾರಣೆಯ ಸುಲಭತೆ, ಪ್ರಾದೇಶಿಕ ಭಾಷಾ ವೈವಿಧ್ಯ ಹಾಗೂ ಕಾಲಾನುಕ್ರಮದಲ್ಲಿ ಉಂಟಾಗುವ ಭಾಷಾ ಪರಿವರ್ತನೆಗಳನ್ನು ಪ್ರತಿಬಿಂಬಿಸುತ್ತವೆ. ಪರಿವೇಷ್ಟಿತ ಧ್ವನಿಗಳ ಅಧ್ಯಯನವು ಕನ್ನಡ ಭಾಷೆಯ ಐತಿಹಾಸಿಕ ಬೆಳವಣಿಗೆ ಮತ್ತು ಉಪಭಾಷೆಗಳ ವೈಶಿಷ್ಟ್ಯಗಳನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಿದೆ. ಈ ಸಂಶೋಧನೆಯು ಧ್ವನಿವಿಜ್ಞಾನ, ರೂಪವಿಜ್ಞಾನ ಹಾಗೂ ಭಾಷಾ ಪರಿವರ್ತನೆಯ ಅಧ್ಯಯನಕ್ಕೆ ಹೊಸ ಒಳನೋಟಗಳನ್ನು ಒದಗಿಸುತ್ತದೆ. ಜೊತೆಗೆ, ಆಧುನಿಕ ಕನ್ನಡದ ಉಚ್ಚಾರಣಾ ಮಾನದಂಡಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಲು ಈ ಅಧ್ಯಯನವು ಉಪಯುಕ್ತವಾಗಿದೆ. ಕನ್ನಡ ಭಾಷೆಯ ಧ್ವನಿವಿಜ್ಞಾನದ ಸಂಶೋಧನೆಗೆ ಈ ಅಧ್ಯಯನವು ಮಹತ್ವದ ಕೊಡುಗೆಯಾಗಿ ಪರಿಣಮಿಸುತ್ತದೆ.

**ಪರಾಮರ್ಶನ ಗ್ರಂಥಗಳು**


- ಬಸವರಾಜು, ಎಲ್. (1974). *ಕನ್ನಡ ಧ್ವನಿಶಾಸ್ತ್ರ.* ಗೀತಾ ಬುಕ್ ಹೌಸ್.
- ಬಿ.ಎಂ.ಶ್ರೀ. (1985). *ಕನ್ನಡ ಧ್ವನಶಾಸ್ತ್ರ* ಚರಿತ್ರೆ. ತನುಮನ ಪ್ರಕಾಶನ.
- ಕರ್ಕಿ, ಡಿ.ಎಸ್. (2011). *ಕನ್ನಡ ಧ್ವನಿವಿಜ್ಞಾನ.* ಭಾರತ ಪ್ರಕಾಶನ.
- ಕೃಷ್ಣಮೂರ್ತಿ, ಪಿ.ವಿ. (ಸಂ.). (1980). *ಕನ್ನಡ ಧ್ವನಿಶಾಸ್ತ್ರ ಚರಿತ್ರೆ.,* ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- ಕೃಷ್ಣರಾವ್. (1968). ಕನ್ನಡ ಭಾಷೆಯ ಸ್ವರೂಪ.
- ವೆಂಕಟಾಚಲಶಾಸ್ತ್ರಿ,, ಟಿ.ವಿ. (2000). *ಕನ್ನಡ ಧ್ವನಶಾಸ್ತ್ರ.* (4ನೇ ಮುದ್ರಣ). ಮೈಸೂರು: ಡಿ.ವಿ.ಕೆ. ಮೂರ್ತಿ.
- ವೆಂಕಟಾಚಲಶಾಸ್ತ್ರಿ, ಟಿ.ವಿ. (2014). *ಕನ್ನಡ ವ್ಯಾಕರಣ.* ಡಿ.ವಿ.ಕೆ. ಮೂರ್ತಿ.
- ಪೂಜಾರ, ಎಂ. ಪಿ. (1952). ಕೆಲವು ಕನ್ನಡ ವ್ಯಾಕರಣ ವಿಚಾರಗಳು. ಕನ್ನಡ ಸಂಶೋಧನಾ ಸಂಸ್ಥೆ.
- ರಾಮಚಂದ್ರ, ಸಿ.ಎಸ್. (1999). ಕನ್ನಡ ಭಾಷಾಲೋಚನ. ಮಾಂಗಿರಿ ಪ್ರಕಾಶನ.
- Upadyaya, U.P. (2000). Kannada Phonetic Reader. Central Institute of Indian Languages.